
ಇದ್ದಿದ್ರೆ ರಾಜನ ಹಾಗೆ ಬದುಕಬಹುದಿತ್ತು ಎಂದ. ಜೊತೆಗೆ ನೀವು ಮಕ್ಕಳು ಮಾತ್ರ ಬಹಳ ಹುಷಾರು ಎಂದು ಹೊಗಳಿದ. ಅವನು ಹೊಗಳಿದ್ದೋ ತೆಗಳಿದ್ದೋ ತಿಳೀಲಿಲ್ಲ. ಹುಷಾರೇನೂ ಇಲ್ಲ ಅಪ್ಪನಂತೆ ಕಂಡ ಕಂಡವರ ಉಸಾಬರಿಗೆ ಹೋಗಿ ನಮ್ಮ ತುತ್ತು ಕೂಳಿನ ಕಷ್ಟಕ್ಕೆ ಸಿಕ್ಕಿಹಾಕಿಕೊಳ್ಳಲಿಲ್ಲ ಅಷ್ಟೇ ಎಂದೆ ಮಾರ್ಮಿಕವಾಗಿ.

ಅಪ್ಪ ಎಷ್ಟೇ ಊರಿನ ಹೆಣ ಕಾಯೋ ಕೆಲ್ಸ ಮಾಡಿದ್ರೂ, ಜನ ಅವನ ಪ್ರತಾಪಗಳನ್ನ ಎಷ್ಟೇ ಕೊಂಡಾಡಿದ್ರೂ, ಅವನ ಇಮೇಜ್ ಅಷ್ಟೇನು ಚೆನ್ನಾಗಿರಲಿಲ್ಲ. ಕೋಪಿಷ್ಠ, ದುಡುಕು, ಚಿನ್ನದಂತ ಹೆಂಡ್ತಿ ಮುತ್ತಿನಂತಹ ಮಕ್ಕಳಿದ್ರೂ ನೆಟ್ಗೆ ಸಂಸಾರ ಮಾಡ್ದೆ ಊರೂರು ತಿರುಗಿಕೊಂಡಿರೊ ಉಡಾಳ ಅಂತ ಆಡಿಕೊಂಡವ್ರೇ ಹೆಚ್ಚು. ಎದುರ್ಗೆ ಹೇಳೋಕೆ ಯಾರ್ಗೂ ಧೈರ್ಯ ಇರಲಿಲ್ಲ. ಒಂದ್ಸಾರಿ ಅವನ ಅಣ್ಣ ಯಾವ್ದೋ ವಿಷಯಕ್ಕೆ ಬುದ್ಧಿ ಹೇಳೋಕೆ ಹೋದಾಗ ಸ್ವಂತ ಅಣ್ಣಂಗೇ ಚಪ್ಪಲಿ ಸೇವೆ ಮಾಡಿದ್ನಂತೆ ಅಂಥಾ ಕೋಪಿಷ್ಠ ನಮ್ಮಪ್ಪ. ಆದರೆ ಅಮ್ಮನ ವಿಷಯದಲ್ಲಿ ಊರಿನ ಜನರಿಗೆ ತುಂಬಾ ಗೌರವ. ಇಂಥಾ ಗಂಡನ್ ಕಟ್‌ಕೊಂಡು ಸಂಸಾರ ನಿಭಾಯ್ಸಿದ ಪುಣ್ಯಾದಿಗಿತ್ತಿ. ಒಂದಿನ ಒಬ್ಬರ ಜೊತೆ ತನ್ ಕಷ್ಟ ಹೇಳ್ಕೊಳ್ಳಿಲ್ಲ. ಯಾರ ಜೊತೆನೂ ಒಂದಿನ ತನ್ ಗಂಡನ ದೂಷಿಸ್ದವಳಲ್ಲ. ಗಟ್ಟಿಗಿತ್ತಿ. ಅವಳು ಪಟ್ಟಿರೋ ಕಷ್ಟಕ್ಕೆ ಒಂದಲ್ಲ ಒಂದು ದಿನ ದೇವರು ಕಣ್ಬಿಡ್ತಾನೆ ಅಂತಿದ್ರು ಜನ.




ಹಾಗೇ ಆಯ್ತು ಕೂಡ. ಅಮ್ಮನ ಕಷ್ಟದ ದಿನಗಳು ದೂರವಾದವು. ಕಾಲಾನುಕ್ರಮೇಣ ಮಕ್ಕಳು ಮೊಮ್ಮಕ್ಕಳೊಂದಿಗೆ ತನ್ನ ಸಂಧ್ಯಾಕಾಲದಲ್ಲಿ ಸಂತೃಪ್ತಿಯ ಜೀವನ ಕಂಡಳು. ನಗುನಗುತ್ತಲೇ ಇಹ ಲೋಕದ ವ್ಯಾಪಾರ ಮುಗಿಸಿದಳು. ಇದಾಗಿಯೂ ಈಗ ಮೂರು ವರ್ಷದ ಮೇಲಾಯಿತು. ಈಗ ಬದುಕಿನಲ್ಲಿ ಎಲ್ಲವೂ ಸುಸೂತ್ರವಾಯಿತು ಎನಿಸುತ್ತಿರುವ ಈ ಸಮಯದಲ್ಲಿ ಈ ಅಪ್ಪ ಹೀಗೇಕೆ ನನ್ನನ್ನು ಆವರಿಸಿಕೊಂಡಿದ್ದಾನೆಂದು ತಿಳಿಯುತ್ತಿಲ್ಲ. ಅಮ್ಮನೊಂದಿಗೆ ನನ್ನ ಬದುಕಿನ ಪಯಣ ಒಂದು ರೀತಿಯ ಪರಿಪೂರ್ಣತೆ ಕಂಡಿದೆ. ಅವಳ ನೆನಪು ಮನಸ್ಸಿಗೆ ಒಂದು ರೀತಿಯ ಪ್ರಶಾಂತತೆಯನ್ನು ನೀಡುತ್ತದೆ. ಆದರೆ ಅಪ್ಪನ ವಿಷಯ ಹಾಗಲ್ಲ ಅವನ ನೆನಪಾದೊಡನೆ ಒಂದು ರೀತಿಯಲ್ಲಿ ಅಸ್ವಸ್ಥನಾಗುತ್ತೇನೆ. ಯಾಕೋ ಗೊತ್ತಾಗುತ್ತಿಲ್ಲ. ಒಂದು ರೀತಿಯ ಅಪೂರ್ಣತೆ ಉಂಟಾಗುತ್ತದೆ. ಅವನ ಸ್ಪಷ್ಟ ರೂಪವೇ ನನ್ನ ಮನಸ್ಸಿನಲ್ಲಿಲ್ಲದಿರಬಹುದು. ಅವನ ರಕ್ತವೇ ತಾನೇ ನನ್ನ ಮೈಯಲ್ಲಿ ಹರಿಯುತ್ತಿರುವುದು. ಅವನಿಗೂ ನನಗೂ ಮಧ್ಯೆ ಯಾವುದೋ ಒಂದು ಮುಖ್ಯವಾದ ಕೊಂಡಿ ಕಳಚಿಕೊಂಡಿರುವಂತೆ ಭಾಸವಾಗುತ್ತಿದೆ ವಿಚಿತ್ರವೆನಿಸುತ್ತಿದೆ, ಆದರೂ ಆ ಕಳಚಿರುವ ಕೊಂಡಿಯನ್ನು ಹುಡುಕುವ ತುಡಿತ ಕ್ಷಣ ಕ್ಷಣಕ್ಕೂ ಹೆಚ್ಚಾಗುತ್ತಿದೆ.



ಹುಡುಕುತ್ತೇನೆ ಹುಡುಕುತ್ತೇನೆ ಒಳಗೇ ನನ್ನೊಳಗೇ ಆಳವಾಗಿ ಇನ್ನೂ ಆಳವಾಗಿ ಕಳಚಿರುವ ಕೊಂಡಿ ಕೂಡಿಕೊಳ್ಳುವವರೆಗೆ ಆದರೆ ಒಮ್ಮೊಮ್ಮೆ ಏನು ಹುಡುಕುತ್ತಿದ್ದೇನೆಂದು ಸ್ಪಷ್ಟವಿಲ್ಲದೆ ವ್ಯಗ್ರನಾಗುತ್ತೇನೆ. ನಿನ್ನೆ ರಾತ್ರಿ ಸಮಯಕ್ಕೆ ಸರಿಯಾಗಿಯೇ ಮಲಗಿದೆ. ಆದರೆ ನಿದ್ರೆ ಹತ್ತಿದ್ದು ಮಾತ್ರ ಬಹಳ ತಡವಾಗಿ. ಮಧ್ಯರಾತ್ರಿ ಮೀರಿರಬೇಕು. ಬೆಳಿಗ್ಗೆ ಎಂದಿನಂತೆ ಎದ್ದು, ವಾಕಿಂಗ್ ಮುಗಿಸಿ ಬಂದು ದಿನಪತ್ರಿಕೆ ಬಿಡಿಸುತ್ತಾ ಕೂತೆ. ಕೈಯಲ್ಲಿ ಮೊಬೈಲ್ ಹಿಡಿದು ಮಡದಿ ಬಂದಳು.

ರೀ ಊರಿಂದ ಸುದ್ದಿ ಬಂತು. ಇವತ್ತು ಬೆಳಗಿನ ಜಾವ ಶೇಷಣ್ಣ ಹೋಗಿಬಿಟ್ಟರಂತೆ. ಶೇಷಣ್ಣ ನಮ್ಮ ದೂರದ ಸಂಬಂಧಿ. ಕೆಲವು ಕ್ಷಣ ಮೌನ ಆವರಿಸಿತು. ದಿಢೀರ್ ಎಂದು ನಿರ್ಧರಿಸಿದವನಂತೆ ಸರಿ ಹೋಗಿ ನೋಡಿ ಬರುತ್ತೇನೆ' ಎಂದೆ. ರೀ ನೀವಾ ಎಂದಳು ಅಚ್ಚರಿಯಿಂದ.

ಹೌದು ನಾನೆ ಎಂದೆ.

ರೀ ಅಮಚವಾಡಿಯಲ್ಲಿ ಎಂದಳು.

ಗೊತ್ತು ಪರವಾಗಿಲ್ಲ ಹೋಗಿಬರುತ್ತೇನೆ ಎಂದೆ ದೃಢನಿಶ್ಚಯದಿಂದ.

ಆಫೀಸು ರಜೆ ಹಾಕುತ್ತೇನೆ. ನನ್ನ ಅನಿರೀಕ್ಷಿತ ನಡತೆಯಿಂದ ಪರಮಾಶ್ಚರ್ಯವಾಗಿರಬೇಕು ಅವಳಿಗೆ. ಅವಳಿಗೇನು ಹೀಗೆ ದಿಢೀರ್ ಬದಲಾದ ನನ್ನ ನಡವಳಿಕೆಗೆ ನಾನೇ ದಿಗ್ಮೂಢನಾದೆ.

ಅಲ್ಲಾ ನನಗೆ ತಿಳುವಳಿಕೆ ಬಂದಾಗಿನಿಂದ, ನನ್ನ ಹತ್ತಿರದ ಸಂಬಂಧಿಗಳಲ್ಲೇ ಎಷ್ಟು ಸಾವುಗಳಾಗಿಲ್ಲ. ಒಂದಾದರೂ ಚಟ್ಟಕ್ಕೆ ಅಪ್ಪನಂತೆ ಹೆಗಲು ಕೊಟ್ಟೆನೇ. ಒಂದಾದರೂ ಮದುವೆ ಮುಂಜಿಯಲ್ಲಿ ಅಪ್ಪನಂತೆ ನಾಲ್ಕು ಜನರ ಊಟಕ್ಕೆ ಎಲೆ ಹಾಕಿದೆನೆ, ವರ್ಷಕ್ಕೊಂದು ದಿನ ಊರಿನ ಜಾತ್ರೆಗೆ ಹೋದರುಂಟು... ಇಲ್ಲವಾದ್ರೆ ಇಲ್ಲಾ.

ಈ ಪರಿಯ ನಾನು ಈ ದಿನ, ಹಾಗೇ ಕಣ್ಣು ಮುಚ್ಚಿ ಸೋಫಾಗೆ ಒರಗಿ ಯೋಚಿಸತೊಡಗಿದೆ. ಎಂತಹ ಬದಲಾವಣೆ. ಎಲ್ಲೋ ಮನಸ್ಸಿನ ಮೂಲೆಯಲ್ಲಿ ನನ್ನ ಹುಡುಕಾಟಕ್ಕೆ ಪರಿಹಾರ ಸಿಕ್ಕಂತೆ ಭಾಸವಾಗುತ್ತಿದೆ. ಅಪ್ಪನಿಂದ ಕಳಚಿಕೊಂಡಿರುವ ಕೊಂಡಿ ಕೂಡಿಕೊಳ್ಳುತ್ತಿದೆ ಎನಿಸುತ್ತಿದೆ. ನಾಲ್ಕು ಜನರ ಕಷ್ಟ ಸುಖದಲ್ಲಿ ಭಾಗಿಯಾಗಿ ಬದುಕಬೇಕೆಂಬ ಅಪ್ಪನ ಸಹಜ ಸ್ವಭಾವದೊಂದಿಗೆ ನಾನು ಬೆಸೆದುಕೊಳ್ಳುತ್ತಿದ್ದೇನೆಂಬ ಅರಿವಾಗಿ ಮನಸ್ಸಿನೊಳಗೇ ಸಣ್ಣಗೆ ಹಿತವಾಗಿ ನಕ್ಕೆ. ಶೇಷಣ್ಣನ ಚಟ್ಟಕ್ಕೆ ಹೆಗಲು ಕೊಡುವ ನಿಶ್ಚಯ ಗಟ್ಟಿಯಾಗುತ್ತಿದ್ದಂತೆಯೇ ಮನಸ್ಸು ನಿರಾಳವಾಗತೊಡಗಿತು. ಎದ್ದು ಊರಿಗೆ ಹೊರಡಲು ಸಿದ್ಧನಾಗತೊಡಗಿದೆ.

ಪ್ರತಿಕ್ರಿಯಿಸಿ:
feedback@sudha.co.in